## 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾಸನ.

**ಃ ಎಸ್.ಸಿ. ಸಂಖ್ಯೆಃ 8/2022 ಃ**

**ಪಿರ್ಯಾದುದಾರರು** ಃ ರಾಜ್ಯದ ಪರವಾಗಿಃ

ಹೊಳೆನರಸೀಪುರ ಟೌನ್ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿತ/ರು** ಃ 7. ರಿಜ್ವಾನ್ ಶರೀಫ್ ಬಿನ್ ಲೇಟ್ ಬಾಬು,

ಸುಮಾರು 25 ವರ್ಷ ವಯಸ್ಸು,

ವಾಸಃ ನಂ.18, ಸರ್ಕಾರಿ ಶಾಲೆ ಹತ್ತಿರ,

ತಮ್ಮೇನಹಳ್ಳಿ, ಬೆಂಗಳೂರು ಉತ್ತರ.

ಬೆಂಗಳೂರು ಸಿಟಿ.

**(ಮೂಲ ಸಿಸಿ 3870/2015 ರಲ್ಲಿ 7ನೇ ಆರೋಪಿಯು ಬೇರ್ಪಟ್ಟು, ಸಿಸಿ 68/2016 ರಂತೆ ಪ್ರಕರಣವನ್ನು ದಾಖಲಿಸಿ, ಅಧಿವಿಚಾರಣೆಗೆ ಈ ನ್ಯಾಯಾಲಯಕ್ಕೆ ಒಪ್ಪಿಸಿದೆ)**

**ಶ್ರೀ ದೊಡ್ಡೇಗೌಡ ಕೆ.**, 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾಸನ, ಆದ ನಾನು ನಿಮ್ಮ ವಿರುದ್ಧ ಹೊರಿಸಿರುವ ದೋಷಾರೋಪಣೆ ಏನೆಂದರೆಃ

## ದೋಷಾರೋಪಣೆ

ಹೊಳೆನರಸೀಪುರ ಟೌನ್ ಕೊರಮರ ಬೀದಿಯಲ್ಲಿ ವಾಸವಾಗಿರುವ ಹಜೀರಾಖಾನ್ ರವರ ಮಗಳಾದ ನಗ್ಮಾ ಖಾನ್ ರವರೊಂದಿಗೆ ಗೌಸ್ ಖಾನ್ ನ ಮಗ ಜಬೀರ್ ಖಾನರವರ ಮದುವೆ ನಿಶ್ಚಯವಾಗಿದ್ದು, ಎರಡೂ ಕುಟುಂಬಗಳಿಗೂ ಸಣ್ಣ ಪುಟ್ಟ ಕಾರಣದಿಂದ ಜಗಳವಾಗಿ

ಮದುವೆ ನಿಂತು ಹೋಗಿದ್ದು, ಈ ಮಧ್ಯೆ ಗೌಸ್ ಖಾನ್ ರವರ ಮಗಳು ಉಜುಮಾ ಖಾನಳು ಮನೆ ಬಿಟ್ಟು ಹೋಗಿದ್ದವಳು ಪುನಃ ವಾಪಸ್ ಮನೆಗೆ ಬಂದಿದ್ದಳು. ಈ ವಿಚಾರ ತಿಳಿದ 7ನೇ ಆರೋಪಿಯಾದ ನೀವು 1 ರಿಂದ 6ನೇ ಆರೋಪಿಗಳೊಂದಿಗೆ ಸೇರಿಕೊಂಡು ಸಮಾನ ಉದ್ದೇಶದಿಂದ ಸಾಕ್ಷಿ.4/ದಿಲ್ಷಾದ್ ಮತ್ತು ಇವರ ಮನೆಯವರು ತಮ್ಮ ಮನೆಯ ಹತ್ತಿರ ಇರುವಾಗ ಮತ್ತು ದಾರಿಯಲ್ಲಿ, ಸಿಕ್ಕಿದಾಗಲೆಲ್ಲಾ ಓಡಿ ಹೋದ ಮಗಳನ್ನು ಮನೆಗೆ ಸೇರಿಸಿಕೊಂಡಿದ್ದೀರ ಎಂದು ಚುಡಾಯಿಸುತ್ತಾ ಮಾನಸಿಕವಾಗಿ ಕಿರುಕುಳ ಕೊಡುತ್ತಿದ್ದು, ನೀವು ಬದುಕುವುದಕ್ಕಿಂತ ವಿಷ ಕುಡಿದು ಸಾಯುವುದೇ ವಾಸಿ ಎಂದು ಆತ್ಮಹತ್ಯೆ ಮಾಡಿಕೊಳ್ಳುವಂತೆ ಪ್ರಚೋದನೆ ನೀಡಿದ್ದು, ನಿಮ್ಮ ಕಿರುಕುಳವನ್ನು ತಾಳಲಾರದೆ ದಿನಾಂಕ 12-06-2015 ರ ಸಂಜೆ 06-30 ಗಂಟೆ ಸಮಯದಲ್ಲಿ, ಸಾಕ್ಷಿ 2/ರಿಹಾನ ಖಾನಂ, ಸಾಕ್ಷಿ-3/ಜಬೀರ್ ಖಾನ್ ಮತ್ತು ಮೃತ ಪಿಜಾ ಖಾನಂ ರವರು ಪಾಯಸಕ್ಕೆ ವಿಷ ಸೇರಿಸಿಕೊಂಡು ಕುಡಿದು ಅಸ್ವಸ್ಥಗೊಂಡು ಚಿಕಿತ್ಸೆಗಾಗಿ ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದು, ಚಿಕಿತ್ಸೆ ಪಲಕಾರಿಯಾಗದ ಪಿಜಾಖಾನಂ ರವರು ಹೊಳನರಸೀಪುರ ಸರ್ಕಾರಿ ಆಸ್ಪತ್ರೆಯಲ್ಲಿ ಅದೇ ದಿವಸ ಸಂಜೆ 07-30 ಗಂಟೆ ಸಮಯದಲ್ಲಿ ಮೃತಪಟ್ಟಿದ್ದು, ಆ ಮೂಲಕ 7ನೇ ಆರೋಪಿಯಾದ ನೀವು ಸಾಕ್ಷಿ 2, 3 ಮತ್ತು ಮೃತೆ ಪಿಜಾಖಾನಂ ರವರಿಗೆ ಮಾನಸಿಕ ಕಿರುಕುಳ ನೀಡಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಚೋದನೆ ನೀಡಿ **ಭಾ.ದಂ.ಸಂ. ಕಲಂ.306 ಸಹವಾಚಕ 34**ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

ಮೇಲೆ ಹೇಳಿದ ಆರೋಪವು ನನ್ನ ಸಂಜ್ಞೆಗೆ ಒಳಪಡುತ್ತದೆ ಹಾಗೂ ಆರೋಪಿತ/ರಾದ ನೀವು/ಗಳು ಮೇಲೆ ಹೇಳಿದ ಆರೋಪಕ್ಕೆ ಅಧಿವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

(ದೊಡ್ಡೇಗೌಡ ಕೆ.)

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಹಾಸನ.

ದಿನಾಂಕಃ 01-08-2026